ಚಾಸಾಃ 20
ಫ್ರಾಸಾಃ 06

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಶಿಡ್ಲಘಟ್ಟ.
ಸಿಸಿ ಸಂಖ್ಯೆ: 286/2023
ದಿನಾಂಕಃ 07.01.2026 ರಂದು ಸಾಕ್ಷಿಗೆ ಪ್ರಮಾಣ ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಸಾಕ್ಷಿದಾರರ | : | ವೇಣುಗೋಪಾಲ್ |
| ತಂದೆಯ ಹೆಸರು | : | ಮುನಿಶಾಮಪ್ಪ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಪಿ ಎಸ್ ಐ, ಶಿಡ್ಲಘಟ್ಟ ನಗರ ಪೋಲಿಸ್ ಠಾಣೆ. |
| ವಾಸಸ್ಥಳ | : | ಚಿಕ್ಕ ಬಳ್ಳಾಪುರ. |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ನಾನು 2023 ಜುಲೈಯಿಂದ ಇವರೆಗೆ ಶಿಡ್ಲಘಟ್ಟ ನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸ್ತಿದ್ದೇನೆ.

2. ಈ ಪ್ರಕರಣದಲ್ಲಿ ದಿನಾಂಕ 30-07-2023 ರಂದು ಬೆಳಿಗ್ಗೆ 8.30 ರ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ಗಣಕೀಕೃತ ದೂರನ್ನು ನೀಡಿದ್ದು, ಅದರಂತೆ ಪ್ರ.ವ.ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಅದೇ ದಿನ ಶಿಡ್ಲಘಟ್ಟ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿ ಅಲ್ಲಿ ಶವಗಾರದಲ್ಲಿದ್ದ ಮೃತ ಶೇರ್ ಅಲಿ ಖಾನ್ ರವರ ಶವಪಂಚನಾಮೆಯನ್ನು ಚಾಸಾ-4 ರಿಂದ 6 ರವರ ಸಮಕ್ಷಮ ಕೈಗೊಂಡಿರುತ್ತೇನೆ. ಆ ಬಗ್ಗೆ ಚಾಸಾ 7 ರಿಂದ ಚಾಸಾ 10 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಮುಂದಿನ ತನಿಖೆಗೆ ಹಿಡಿಯ ಅಧಿಕಾರಿಗೆ ವಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ನಿಪಿ 1 ರಲ್ಲಿ ತನ್ನ ಸಹಿಯನ್ನು ನಿಪಿ 1(ಬಿ) ಮತ್ತು ಪ್ರ.ವ.ವರದಿಯನ್ನು ನಿಪಿ 13 ಎಂದು ಸಾಕ್ಷಿ ಸಹಿಯನ್ನು ನಿಪಿ 13(ಎ) ಎಂದು, ನಿಪಿ 9 ರಲ್ಲಿ ಸಾಕ್ಷಿ ಸಹಿಯನ್ನು ನಿಪಿ 9(ಎ) ಯಿಂದ (ಸಿ) ಎಂದು ನೋಡಿ ಗುರುತಿಸಿಕೊಂಡಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ  ವಕೀಲರಿಂದಃ

3. ದೂರನ್ನು ಚಾಸಾ 1 ರವರು ಬೆಳಿಗ್ಗೆ 8.30ರ ಸಮಯದಲ್ಲಿ ಠಾಣೆಗೆ ಹಾಜರಾಗಿ ನೀಡಿದರು. ಚಾಸಾ 1 ರವರು ಒಬ್ಬರೇ ಬಂದಿದ್ದರು. ಶಿಡ್ಲಘಟ್ಟ ದಿಬ್ಬರೂಹಳ್ಳಿ ರಸ್ತೆಯು ಜನಸಂದಣಿಯಿಂದ ಕೂಡಿರುತ್ತದೆ ಎಂದರೆ ಸರಿ. ಆ ರಸ್ತೆಯಲ್ಲಿ ಯಾವುದೇ ಬಾರಿವಾಹನ 20 ಅಥವಾ 30 ಕಿ ಮೀ ವೇಗಕ್ಕಿಂತ ಹೆಚ್ಚಾಗಿ ಹೋಗಲು ಆಗುವುದಿಲ್ಲ ಎಂದರೆ ಸರಿ. ಆರೋಪಿ ತಪ್ಪಿನಿಂದ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದಂತೆ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಮೃತನ ಕುಟುಂಬಕ್ಕೆ ಪರಿಹಾರ ಸಿಗಲಿ ಎಂದು ಚಾಸಾ 1 ರವರೊಂದಿಗೆ ಸುಳ್ಳು ದೂರನ್ನು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓದಿ ಹೇ ಕೇ ಸರಿ ಇದೆ

(ಮಹಮ್ಮದ್ ರೋಷನ್ ಷಾ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಶಿಡ್ಲಘಟ್ಟ.